RNU AIR DHARWAD

**NOVEMBER 18,2024**
**ALL INDIA RADIO- DHARWAD**
**PRADESH SAMACHARA (KANNADA) 12PM**

<><><>

ಆಕಾಶವಾಣಿ

ಪ್ರದೇಶ ಸಮಾಚಾರ

ಓದಿದವವರು: ವಿವೇಕಾದಿತ್ಯ ಕನಿಯಾಲ

<><><>

ಸಾರ್ವಜನಿಕರಿಗೆ ಉತ್ತಮ ಸೇವೆ ಒದಗಿಸುತ್ತಿರುವ, ಬೆಂಗಳೂರಿನ ಸರ್ಜಿಕಲ್ ಸೊಸಾಯಿಟಿ, 50 ವರ್ಷಗಳನ್ನು ಪೂರೈಸಿ, ಸುವರ್ಣ ಮಹೋತ್ಸವ ಸಂಭ್ರಮದಲ್ಲಿರುವುದು, ಅಭಿನಂದನೀಯ ಎಂದು, ವೈದ್ಯಕೀಯ ಶಿಕ್ಷಣ ಖಾತೆ ಸಚಿವ ಶರಣ ಪ್ರಕಾಶ ಪಾಟೀಲ, ಹೇಳಿದ್ದಾರೆ. ಬೆಂಗಳೂರಿನಲ್ಲಿ ‘ಸರ್ಜಿಕಲ್ ಸೊಸಾಯಿಟಿ’ ಆಯೋಜಿಸಿದ್ದ, ರಾಷ್ಟ್ರೀಯ ನಿರಂತರ ಶಸ್ತ್ರಚಿಕಿತ್ಸಾ ಶಿಕ್ಷಣ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಸರ್ಜಿಕಲ್ ಸೊಸಾಯಿಟಿಗೆ, ಸಾವಿರದ ಐನೂರಕ್ಕೂ ಹೆಚ್ಚು ಶಸ್ತ್ರಚಿಕಿತ್ಸಕರು, ತಜ್ಞರು ಸದಸ್ಯರಾಗಿರುವುದು ಸಂತಸದ ವಿಚಾರ ಎಂದರು.

<><><>

ಕರ್ನಾಟಕ ಲೋಕಾಯುಕ್ತದಲ್ಲಿ, 20 ಸಾವಿರಕ್ಕೂ ಹೆಚ್ಚು ಪ್ರಕರಣಗಳು ವಿಚಾರಣೆಗೆ ಬಾಕಿ ಇವೆ. ಈ ಪ್ರಕರಣಗಳ ತ್ವರಿತ ವಿಲೇವಾರಿಗೆ, ಸಿಬ್ಬಂದಿ ಹಾಗೂ ಮೂಲ ಸೌಕರ್ಯ ಒದಗಿಸುವಂತೆ, ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗುವುದು ಎಂದು, ಉಪ ಲೋಕಾಯುಕ್ತ, ನ್ಯಾಯಮೂರ್ತಿ ಬಿ.ವೀರಪ್ಪ ತಿಳಿಸಿದ್ದಾರೆ. ಕಲಬುರಗಿಯಲ್ಲಿ ಸುದ್ದಿಗೋಷ್ಠಿ ನಡೆಸಿದ ಅವರು, ಇಬ್ಬರು ಉಪ ಲೋಕಾಯುಕ್ತರು, ತಲಾ 15 ಜಿಲ್ಲೆಗಳನ್ನು ಹಂಚಿಕೆ ಮಾಡಿಕೊಂಡು, ದೂರುದಾರ, ನೌಕರರ ಸಮಕ್ಷಮ ಆಲಿಸಿ, ಪ್ರಕರಣಗಳ ವಿಲೇವಾರಿಗೆ ಆದ್ಯತೆ ನೀಡಲಾಗುತ್ತಿದೆ. ಕಲಬುರಗಿ ಹಾಗೂ ಧಾರವಾಡ ವಿಭಾಗಕ್ಕೆ ಓರ್ವ ಲೋಕಾಯುಕ್ತರ ಅವಶ್ಯಕತೆ ಇದೆ ಎಂದರು.

<><><>

ಯುವಜನತೆ ಡಿಜಿಟಲ್ ತಂತ್ರಜ್ಞಾನಗಳನ್ನು ಕೃಷಿಯಲ್ಲಿ ಅಳವಡಿಸಿಕೊಂಡು ಕೃಷಿಯಲ್ಲಿ ಕ್ರಾಂತಿಕಾರಕ ಬದಲಾವಣೆಯನ್ನು ತರಬೇಕಾಗಿದೆ ಎಂದು ರಾಜ್ಯ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ ಆಶಿಸಿದ್ದಾರೆ. ಬೆಂಗಳೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಜರುಗಿದ ಕೃಷಿ ಮೇಳದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ರೈತರು ತಾವು ಬಳಸಿದ ಕೃಷಿ ತಾಂತ್ರಿಕತೆಗಳು ಹಾಗೂ ನೂತನ ತಳಿಗಳ ಮಾಹಿತಿಯನ್ನು, ಇತರರೊಂದಿಗೆ ಹಂಚಿಕೊಳ್ಳುವುದರಿಂದ, ಕೃಷಿ ಮೇಳಗಳಿಗೆ

ಅರ್ಥ ಬರುತ್ತದೆ ಎಂದರು. ಅಧ್ಯಕ್ಷತೆ ವಹಿಸಿದ್ದ ಕೃಷಿ ವಿಶ್ವವಿದ್ಯಾಲಯದ ಉಪ ಕುಲಪತಿ ವಿ.ಎಸ್ ಸುರೇಶ ಮಾತನಾಡಿ, ಡಿಜಿಟಲ್ ಕೃಷಿ ಭವಿಷ್ಯದ ಕೃಷಿಗೆ ಮುನ್ನುಡಿಯಾಗಿದೆ. ಹವಾಮಾನ ಆಧಾರಿತ ಕೃಷಿ, ಆಹಾರ ಉತ್ಪಾದನೆ ಹೆಚ್ಚಿಸುವುದರ ಜೊತೆ, ರೈತರ ಆರ್ಥಿಕ ಸಬಲೀಕರಣಕ್ಕೂ ಸಹಕಾರಿಯಾಗಲಿದೆ, ಎಂದರು.

<><><>

ಬೆಂಗಳೂರಿನಲ್ಲಿ ಆಯೋಜಿಸಲಾಗಿದ್ದ, 12ನೇ ಶೃಂಗಸಭೆಯಲ್ಲಿ, ವಿಶೇಷಚೇತನರ ಕಲಾ ಕೌಶಲಗಳ ಪ್ರದರ್ಶನ, ನಡೆಯಿತು. ಎರಡು ದಿನಗಳ ಭಾರತ ಶೃಂಗ ಸಭೆಯಲ್ಲಿ, ದೇಶದ ವಿವಿಧೆಡೆಯ ಚಿಂತಕರು, ವಿಶೇಷ ಚೇತನ ಸಾಧಕರು, ಭಾಗವಹಿಸಿದ್ದರು. 'ಮಿಥ್ಯೆಗಳನ್ನು ತೊಡೆದು ಹಾಕುವುದು, ವೈವಿಧ್ಯತೆಯನ್ನು ಆಲಿಂಗಿಸುವುದು' ಶೃಂಗದ ಘೋಷವಾಕ್ಯವಾಗಿತ್ತು. ಅಂತಾರಾಷ್ಟ್ರೀಯ ಹಾಗೂ ರಾಷ್ಟ್ರೀಯ ಮಟ್ಟದಲ್ಲಿ ಪದಕ ವಿಜೇತ ವಿಶೇಷಚೇತನ ಕ್ರೀಡಾಪಟುಗಳು ಭಾಗವಹಿಸಿ, ತಮ್ಮ ಸಾಧನೆಯ ಹೆಜ್ಜೆ ಗುರುತುಗಳನ್ನು ಸ್ಮರಿಸಿದರು. ಲೇಖಕಿ ಸಿ.ಕೆ ಮೀನಾ ಅವರು ಬರೆದ, 100 ಜನ ವಿಶೇಷ ಚೇತನ ಸಾಧಕರ ಕಥೆಗಳನ್ನು ಒಳಗೊಂಡಿರುವ, 'ಎಲ್ಲರೂ ಯಾವುದರಲ್ಲಾದರೂ ಒಳ್ಳೆಯವರು' ಪುಸ್ತಕ ಲೋಕಾರ್ಪಣೆಗೊಂಡಿತು.

<><><>

ಬೆಂಗಳೂರಿನ ಧೀರಜ್ ಕೆ. ಶ್ರೀನಿವಾಸ್, ಕಲಬುರಗಿಯಲ್ಲಿ ನಿನ್ನೆ ಆರಂಭವಾದ, ಐ.ಟಿ.ಎಫ್. ಅಂತಾರಾಷ್ಟ್ರೀಯ ಟೆನಿಸ್ ಟೂರ್ನಿಯ, ಅರ್ಹತಾ ಸುತ್ತಿನ ಮೊದಲ ಹಂತದಲ್ಲಿ ಜಯಗಳಿಸಿದ್ದಾರೆ. ಕಲಬುರಗಿಯ ಚಂದ್ರಶೇಖರ ಪಾಟೀಲ ಕ್ರೀಡಾಂಗಣದಲ್ಲಿ, ಭಾನುವಾರ ನಡೆದ ಐ.ಟಿ.ಎಫ್. ಪುರುಷರ ಅರ್ಹತಾ ಸುತ್ತಿನ ಪಂದ್ಯದಲ್ಲಿ, ಬೆಂಗಳೂರಿನ ಧೀರಜ್ ಅವರು, ಮುಂಬೈನ ಪ್ರಜ್ವಲ್ ತಿವಾರಿ ವಿರುದ್ಧ, 6–2, 6–2 ಸೆಟ್ ಗಳಿಂದ ಗೆದ್ದು, ಎರಡನೇ ಸುತ್ತಿಗೆ ಪ್ರವೇಶಿಸಿದರು. ಮುಂಬೈನ ಉದಿತ್ ಕಾಂಬೋಜ್ ಅವರನ್ನು ಧೀರಜ್ ಎದುರಿಸಲಿದ್ದಾರೆ.

<><><>

ಕರ್ನಾಟಕ ನಾಮಕರಣದ, 'ಸುವರ್ಣ ಮಹೋತ್ಸವ ಪ್ರಶಸ್ತಿಗೆ' ಭಾಜನರಾಗಿದ್ದ, ಹಿರಿಯ ರಂಗಭೂಮಿ ಕಲಾವಿದೆ, ಶಾಂತಾಬಾಯಿ ಜೋಶಿ ಅವರಿಗೆ, ಹುಬ್ಬಳ್ಳಿಯ ಅವರ ಮನೆಗೆ ತೆರಳಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ಅಶೋಕ ಚಲವಾದಿ ಅವರು, ಸರ್ಕಾರದ ಪರವಾಗಿ ಪ್ರಶಸ್ತಿ ಪ್ರದಾನ ಮಾಡಿ, ಗೌರವಿಸಿದರು. ಪ್ರಶಸ್ತಿ ಸ್ವೀಕರಿಸಿದ ಎಂಬತ್ತೆಂಟು ವರ್ಷದ ಶಾಂತಾಬಾಯಿ ಅವರು, ತಮ್ಮನ್ನು ಗುರುತಿಸಿ, ಜೀವನದ ಸಂಧ್ಯಾಕಾಲದಲ್ಲಿ ಪ್ರಶಸ್ತಿ ನೀಡಿ ಗೌರವಿಸಿರುವುದಕ್ಕೆ ತುಂಬ ಸಂತೋಷವಾಗಿದೆ ಎಂದರು.

<><><>

ಕೋಲಾರ ಗೋಲ್ಡ್ ಫೀಲ್ಡ್ಸ್ – ಭಾರತ್ ಅರ್ಥ್ ಮೂವರ್ಸ್ ಲಿಮಿಟೆಡ್ ಹೊರಗುತ್ತಿಗೆ ಕಾರ್ಮಿಕರ ಸಮಸ್ಯೆಗಳ ಬಗ್ಗೆ, ಕೇಂದ್ರದ ರಕ್ಷಣಾ ಖಾತೆ ಸಚಿವ ರಾಜನಾಥ ಸಿಂಗ್ ಅವರೊಂದಿಗೆ ಚರ್ಚಿಸುವುದಾಗಿ, ಕೇಂದ್ರದ ಬೃಹತ್ ಕೈಗಾರಿಕೆ ಖಾತೆ ಸಚಿವ ಎಚ್.ಡಿ.ಕುಮಾರಸ್ವಾಮಿ, ಭರವಸೆ ನೀಡಿದ್ದಾರೆ.

ಕೆ.ಜಿ.ಎಫ್. ನಲ್ಲಿ ಕಳೆದ 13 ದಿನಗಳಿಂದ ಕಾರ್ಮಿಕರು, ತಮ್ಮ ನ್ಯಾಯಯುತ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿ, ಧರಣಿ ನಡೆಸುತ್ತಿರುವ ಸ್ಥಳಕ್ಕೆ, ಅವರು ಭೇಟಿ ನೀಡಿ, ಕಾರ್ಮಿಕರ ಅಹವಾಲು ಆಲಿಸಿದರು.

<><><>

ದಕ್ಷಿಣಕನ್ನಡ ಜಿಲ್ಲೆ, ಉಳ್ಳಾಲ ಸೋಮೇಶ್ವರದ ಖಾಸಗಿ ರೆಸಾರ್ಟ್‌ನ ಈಜುಗೊಳದಲ್ಲಿ, ಮೈಸೂರು ಮೂಲದ ಮೂವರು ಯುವತಿಯರು, ಮುಳುಗಿ ಸಾವನ್ನಪ್ಪಿದ ಘಟನೆ ಸಂಭವಿಸಿದೆ. ಪ್ರಕರಣ ದಾಖಲಿಸಿಕೊಂಡು, ಪೊಲೀಸರು ತನಿಖೆ ಆರಂಭಿಸಿದ್ದಾರೆ.

<><><>

ರಾಷ್ಟ್ರ ಪ್ರಶಸ್ತಿ ವಿಜೇತ ಬಾಲ ನಟ ರೋಹಿತ್ ಸೇರಿ ನಾಲ್ವರು, ತೀವ್ರವಾಗಿ ಗಾಯಗೊಂಡ ಘಟನೆ, ಮಂಡ್ಯದಲ್ಲಿ ನಡೆದಿದೆ. ಗಾಯಾಳುಗಳನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿದೆ.

<><><>

ವಕ್ಫ್ ಆಸ್ತಿ ವಿವಾದದ ಬಗ್ಗೆ, ಬೆಳಗಾವಿ ಚಳಿಗಾಲದ ಅಧಿವೇಶನದಲ್ಲಿ ಪ್ರಸ್ತಾಪಿಸುವುದಾಗಿ, ವಿಧಾನಸಭೆ ವಿಪಕ್ಷ ನಾಯಕ ಆರ್.ಅಶೋಕ, ಬೆಂಗಳೂರಿನಲ್ಲಿ ಹೇಳಿದ್ದಾರೆ.

<><><>

ಧಾರವಾಡದ, ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಏರ್ಪಡಿಸಿರುವ, ನಿಶಾಂತ ಬಳಿಗಾರ ಅವರ, ಮೂರು ದಿನಗಳ ಚಿತ್ರಕಲಾ ಪ್ರದರ್ಶನವನ್ನು, ಹಿರಿಯ ಕಲಾವಿದ, ಬಿ. ಮಾರುತಿ ಉದ್ಘಾಟಿಸಿದರು.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ 1 ಗಂಟೆ 10 ನಿಮಿಷಕ್ಕೆ..

<><><>